ಅಚ್ಚುಕಟ್ಟು ಪ್ರದೇಶವನ್ನು ನೀರಾವರಿ ಸೌಲಭ್ಯಕ್ಕೆ ಒಳಪಡಿಸಬಹುದೆಂದು ಅಭಿಪ್ರಾಯಪಟ್ಟು ಸದರಿ ಕಾಮಗಾರಿಗಳನ್ನು ₹ 200.00 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಮಂಕಿ ಏತ ನೀರಾವರಿ ಯೋಜನೆ ಬದಲಾಗಿ ಬದಲಿ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಏತ ನೀರಾವರಿ ಯೋಜನೆಗೆ ಅರಣ್ಯ ಇಲಾಖೆ, ಕೊಂಕಣ ರೇಲ್ವೆ ಪ್ರಾಧಿಕಾರ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಮತ್ತು ಅನುಮತಿಯನ್ನು ಪಡೆಯುವುದು ಕಷ್ಟಸಾಧ್ಯವಾಗಿರುತ್ತದೆ.

ಕಾಸರಗೋಡು ಹಂಚು ಕಾರ್ಖಾನೆ

2099(2160); ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ)

ಅ) ರಾಜ್ಯದಲ್ಲಿ ಪ್ರಥಮ ಬಾರಿಗೆ ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲ್ಲೂಕು, ಕಾಸರಗೋಡಿನಲ್ಲಿ ಸ್ಥಾಪನೆಯಾದ ಸಹಕಾರಿ ಹೆಂಚಿನ ಕಾರ್ಖಾನೆಯನ್ನು ಮುಚ್ಚಲು ಕಾರಣವೇನು;

ಆ) ಈ ಹೆಂಚಿನ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಿ ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಪ್ರಕಾಶ್ ಬಾ ಹುಕ್ಕೇರಿ (ಮಾನ್ಯ ಸಣ್ಣ ಕೈಗಾರಿಕೆಗಳು, ಮುಜರಾಯಿ ಮತ್ತು ಸಕ್ಕರೆ ಸಚಿವರು)

ಅ) ಮಾರುಕಟ್ಟೆ, ಪೈಪೋಟಿ, ಕಚ್ಚಾವಸ್ತುವಿನ ಬೆಲೆಯಲ್ಲಿ ಹೆಚ್ಚಳ, ಉತ್ಪಾದನಾ ವೆಚ್ಚ ಹೆಚ್ಚಾಗಿದ್ದರಿಂದ ಹಾನಿ ಅನುಭವಿಸಲು ಕಾರಣವಾಯಿತು. ಅಲ್ಲದೆ ಕಾರ್ಮಿಕರು ಮುಷ್ಕರ ಹೂಡಿದ್ದರಿಂದ ಹೊನ್ನಾವರ ತಾಲ್ಲೂಕಿನ ದಿ.ಎನ್.ಕೆ ಡಿಸ್ಟ್ರಿಕ್ಟ್ ಕೋ–ಆಪ್ ಟೈಲ್ಸ್ ಮ್ಯಾನುಫ್ಯಾಕ್ಚರಿಂಗ್ ಸೊಸೈಟಿ ಲಿ., ಕಾಸರಗೋಡು ಹೆಂಚಿನ

ಕಾರ್ಖಾನೆಯು ದಿನಾಂಕ: 13–7–2001 ರಿಂದ ಉತ್ಪಾದನೆಯನ್ನು ಸ್ಥಗಿತಗೊಳಿಸಿರುತ್ತದೆ.

ನಷ್ಟದಲ್ಲಿದ್ದ ಸದರಿ ಹೆಂಚಿನ ಕಾರ್ಖಾನೆಯು, ಉತ್ತರ ಕನ್ನಡ ಜಿಲ್ಲೆ ಕೇಂದ್ರ ಸಹಕಾರ ಬ್ಯಾಂಕ್‌ಗೆ (ಕೆ.ಡಿ.ಸಿ.ಸಿ. ಬ್ಯಾಂಕ್) ಸಾಲ ಮರುಪಾವತಿಸಲು ಸಾಧ್ಯವಾಗದೇ ಇದ್ದುದರಿಂದ ಮತ್ತು ದುಡಿಮೆ ಬಂಡವಾಳದ ಕೊರತೆಯಿಂದಾಗಿ ಕಾರ್ಖಾನೆಯು ಮುಚ್ಚಲ್ಪಟ್ಟಿರುತ್ತದೆ.

ಆ) ಸದರಿ ಕಾರ್ಖಾನೆಯು ಬ್ಯಾಂಕ್‌ನ ಅವಧಿ ಸಾಲ, ದುಡಿಮೆ ಬಂಡವಾಳ ಸಾಲ, ಬ್ಯಾಂಕ್ ಬಡ್ಡಿ, ಪಿಎಫ್, ಕಾರ್ಮಿಕರ ಗ್ರ್ಯಾಚುಟಿ ಬಾಕಿ, ಸಾರ್ವಜನಿಕರ ಠೇವಣಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಒಟ್ಟು ₹ 400.00 ಲಕ್ಷಗಳ ಹಣವನ್ನು ಬಾಕಿ ಉಳಿಸಿಕೊಂಡಿರುತ್ತದೆ. ಪ್ರವರ್ತಕರು ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸಲು, ಬ್ಯಾಂಕ್ ಸಾಲ ಕಟ್ಟಲು ಹಾಗೂ ಅವರ ಪಾಲಿನ ವಂತಿಕೆಯನ್ನು ಭರಿಸಲು ಸಾಧ್ಯವಿಲ್ಲದ ಕಾರಣ ಉತ್ಪಾದನೆಯನ್ನು ಪುನರಾಂಭಿಸಲು ಮುಂದೆ ಬಂದಿರುವುದಿಲ್ಲ.

ಕ್ರೀಡಾ ವಸತಿ ಶಾಲೆ ಪ್ರಾರಂಭಿಸುವುದು

2100(2490); ಶ್ರೀ ಮನೋಹರ್ ಎಚ್. ತಹಶೀಲ್ದಾರ್ (ಹಾನಗಲ್)

ಅ) ಹಾನಗಲ್ಲ ತಾಲ್ಲೂಕಿನಲ್ಲಿ "ಏಕಲವ್ಯ" ಕ್ರೀಡಾ ವಸತಿ ನಿಲಯ ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ಪ್ರಸ್ತುತ ವರ್ಷದಲ್ಲಿ ಪ್ರಾರಂಭ ಮಾಡಲಾಗುವುದೇ;

ಇ) ಅಕ್ಕಿ ಅಲೂರಿನಲ್ಲಿ ಹೊಸ ಕ್ರೀಡಾಂಗಣ ಪ್ರಾರಂಭಿಸಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?